No.MAG(3)/NPP/98/2023-2024

No.MAG(3)/NPP/99/2023-2024





ಸ್ಥಾಪನೆ : ೧೯೭೯

# ಹೊಂಗನಸು

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು–೧೨೩

ಸಂಪುಟ: ೧೩ ಸಂಚಿಕೆ: ೧೨
Volume: 13 Issue: 12

ಮಾರ್ಚ್ ೨೦೨೬
March 2026

ಪುಟಗಳು-೮
Pages-8

ವಾರ್ಷಿಕ ಚಂದಾ ರೂ.೨೦/-
Annual Subscription Rs.20/-

ಶ್ರೀ ವಿಶ್ವಾವಸು ಸಂವತ್ಸರ
ಫಾಲ್ಗುಣ-ಚೈತ್ರ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕ
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷ

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂರಕ್ಷಕ**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ

**ಸಂಯೋಜಕ**
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

**ಸಂನುಡಿ**

## ಕನ್ನಡ ಸಾಹಿತ್ಯ – ಅಂದು, ಇಂದು, ಮುಂದು

**ಕನ್ನಡ ಸಾಹಿತ್ಯ –**
**ಅಂದು ದೀಪ,**
**ಇಂದು ದಿಕ್ಕು,**
**ಮುಂದು ವಿಶ್ವಮಾನವತೆಯ ಸೇತುವೆ.**
**ಭಾಷೆಯಲ್ಲ,**
**ಜನಜೀವನದ ನಿತ್ಯಸಂಗಾತಿ.**

### ಅಂದು

ಕನ್ನಡ ಸಾಹಿತ್ಯದ ಇತಿಹಾಸವು ಸಾವಿರಾರು ವರ್ಷಗಳ ಪರಂಪರೆಯನ್ನು ಹೊತ್ತಿದೆ. ಪಂಪ, ರನ್ನ, ಜನ್ನ, ಕೇಶಿರಾಜ ಮುಂತಾದ ಕವಿಗಳಿಂದ ಆರಂಭವಾದ ಈ ಸಾಹಿತ್ಯ ಪರಂಪರೆ, ಭಕ್ತಿ, ವೀರಶೈವ, ಜೈನ, ವಚನ, ದಾಸ ಸಾಹಿತ್ಯಗಳ ಮೂಲಕ ಜನಮನವನ್ನು ತಲುಪಿತು. 'ಕಾವ್ಯ'ವು ಕೇವಲ ಆಲಂಕಾರಿಕ ಶೈಲಿಯಲ್ಲ, ಜನಜೀವನದ ಧರ್ಮ, ನೀತಿ, ಭಾವನೆಗಳ ಪ್ರತಿಬಿಂಬವಾಗಿತ್ತು. ಅಂದು ಸಾಹಿತ್ಯವು ಸಮಾಜದ ನೈತಿಕ ದಿಕ್ಕನ್ನು ತೋರಿಸುವ ದೀಪವಾಗಿತ್ತು.

### ಇಂದು

ಕನ್ನಡ ಸಾಹಿತ್ಯವು ವೈವಿಧ್ಯಮಯ ರೂಪಗಳನ್ನು ಪಡೆದುಕೊಂಡಿದೆ. ಕಾದಂಬರಿ, ಕಥೆ, ನಾಟಕ, ಕವನ, ವಿಮರ್ಶೆ, ಅನುವಾದ – ಎಲ್ಲವೂ ಹೊಸ ಶೈಲಿಯಲ್ಲಿ ಬೆಳೆಯುತ್ತಿವೆ. ಡಿಜಿಟಲ್ ಯುಗದಲ್ಲಿ ಬ್ಲಾಗ್, ಇ–ಪುಸ್ತಕ, ಸಾಮಾಜಿಕ ಮಾಧ್ಯಮಗಳ ಮೂಲಕ ಸಾಹಿತ್ಯವು ಜನಸಾಮಾನ್ಯರ ಕೈಗೆ ತಲುಪಿದೆ. ಮಹಿಳಾ ಸಾಹಿತ್ಯ, ದಲಿತ ಸಾಹಿತ್ಯ, ಪರಿಸರ ಸಾಹಿತ್ಯ, ಪ್ರಾಯೋಗಿಕ ಕಾವ್ಯ – ಇವುಗಳು ಕನ್ನಡದ ಅಭಿವ್ಯಕ್ತಿಗೆ ಹೊಸ ಆಯಾಮಗಳನ್ನು ನೀಡಿವೆ. ಇಂದಿನ ಸಾಹಿತ್ಯವು ಕೇವಲ ಮನರಂಜನೆಗೆ ಸೀಮಿತವಾಗದೆ, ಸಾಮಾಜಿಕ ನ್ಯಾಯ, ಸಮಾನತೆ, ಪರಿಸರ ಸಂರಕ್ಷಣೆ, ಮಾನವೀಯತೆ ಮುಂತಾದ ವಿಷಯಗಳನ್ನು ಚರ್ಚಿಸುತ್ತಿದೆ.

### ಮುಂದು

ಕನ್ನಡ ಸಾಹಿತ್ಯವು ಇನ್ನಷ್ಟು ಜಾಗತಿಕವಾಗುವ ಸಾಧ್ಯತೆ ಇದೆ. ಅನುವಾದಗಳ ಮೂಲಕ ಕನ್ನಡದ ಕೃತಿಗಳು ವಿಶ್ವದ ಓದುಗರಿಗೆ ತಲುಪುತ್ತಿವೆ. ಕೃತಕ ಬುದ್ಧಿಮತ್ತೆ, ಡಿಜಿಟಲ್ ಪ್ರಕಾಶನ, ಆಡಿಯೋ ಪುಸ್ತಕ, ದೃಶ್ಯಕಾವ್ಯ – ಇವುಗಳ ಮೂಲಕ ಸಾಹಿತ್ಯದ ಹೊಸ ರೂಪಗಳು ಮೂಡಿಬರುತ್ತಿವೆ. ಆದರೆ, ಮೂಲಭೂತವಾಗಿ ಕನ್ನಡ ಸಾಹಿತ್ಯವು ತನ್ನ ಜನಪರ, ಮಾನವೀಯ, ಆಧ್ಯಾತ್ಮಿಕ ಮೌಲ್ಯಗಳನ್ನು ಉಳಿಸಿಕೊಂಡು, ಹೊಸ ತಲೆಮಾರಿಗೆ ಪ್ರೇರಣೆಯಾಗಬೇಕು. ಮುಂದೆ ಕನ್ನಡ ಸಾಹಿತ್ಯವು 'ಸ್ಥಳೀಯತೆಯಲ್ಲಿರುವ ವಿಶ್ವಮಾನತೆ'ಯನ್ನು ಸಾರುವ ಸೇತುವೆಯಾಗಬಹುದು.

**ಡಾ. ಬೆಳವಾಡಿ. ಕೃ ಪ್ರಭಾಕರ್**
ಸಂಪಾದಕರು

## ಫೆಬ್ರುವರಿ ಮಾಹೆಯಲ್ಲಿ ಇಲ್ಲಿಯವರೆಗೆ ನಡೆದ ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯಕ್ರಮಗಳ ವಿಹಂಗಮ ನೋಟ

### ದಿನಾಂಕ ೦೭/೦೨/೨೦೨೬ ಶನಿವಾರ ಸಂಜೆ 'ಎಂ.ಎ. ಜಯಚಂದ್ರ ದತ್ತಿ ಉಪನ್ಯಾಸ' ನಡೆಯಿತು.

**ಜೈನಸಾಹಿತ್ಯ– 'ಯಶೋಧರ ಚರಿತೆ' ಕುರಿತು ನಿವೃತ್ತ ಕನ್ನಡ ಪ್ರಾಧ್ಯಾಪಕ ಪ್ರೊ. ಎಸ್.ಪಿ. ಅಜಿತ್ ಪ್ರಸಾದ್ ಅವರು ವಿಚಾರ ಮಂಡಿಸಿದರು.**

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ೧೯೯೯ರಲ್ಲಿ ಸ್ಥಾಪಿತವಾಗಿ ಸತತವಾಗಿ ನಡೆದು ಬರುತ್ತಿರುವ ಪ್ರಸ್ತುತ ದತ್ತಿಯ ಕಿರುಪರಿಚಯ ನೀಡಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕೋಶಾಧಿಕಾರಿಗಳಾದ ಪ್ರೊ. ಚಂದ್ರಶೇಖರ ನಾದೂರು ಅವರು ವೇದಿಕೆಯ ಗಣ್ಯರನ್ನು, ದತ್ತಿ ದಾನಿಗಳ ಕುಟುಂಬವನ್ನು, ಜೊತೆಗೆ ಪ್ರತ್ಯಕ್ಷ ಇರುವ ಮತ್ತು ಅಂತರ್ಜಾಲದ ಸಭಿಕರನ್ನು ಸ್ವಾಗತಿಸಿದರು.

'ಯಶೋಧರ ಚರಿತೆ' ವಿಷಯ ಕುರಿತು ಪ್ರೊ. ಎಸ್.ಪಿ. ಅಜಿತ್ ಪ್ರಸಾದ್ ಅವರು ಉಪನ್ಯಾಸ ಪ್ರಾರಂಭಿಸುತ್ತಾ, "ನಾನು ಅನೇಕ ವರ್ಷಗಳ ಹಿಂದೆ ಅರ್ಥ ಮಾಡಿಕೊಂಡ ಈ ಚರಿತ್ರೆಗೂ ಇಂದು ಅರಿವು ಮೂಡಿಸಿರುವ ಅಂಶಗಳಲ್ಲಿಯೂ ಬಹಳ ವ್ಯತ್ಯಾಸ ಇದೆ. ಇಂದಿನ ನನ್ನ ಅನಿಸಿಕೆಗಳು ನಿಮಗೆಲ್ಲಾ ಭಿನ್ನವಾಗಿ ಕಾಣಬಹುದು. ಯಾವುದೇ ಕಾವ್ಯವನ್ನು ಎರಡು ರೀತಿ ಆಹ್ಲಾದಿಸಬಹುದು. ಒಂದು ಹಾಗೇ ಓದಿ ಸಂತೋಷ ಪಡುವುದು. ಎರಡನೆಯದು ಆಳವಾಗಿ ಓದಿ, ಅದರಲ್ಲಿರುವ ಆಳವಾದ ಚಿಂತನೆಗಳನ್ನು ಗ್ರಹಿಸಿಕೊಂಡು ಗುಣಮಟ್ಟದ ಮೇಲೆ ಚರ್ಚೆ ಮಾಡುವುದು. ಅದನ್ನು ವಿಮರ್ಶೆ ಎಂದು ಕರೆಯಬಹುದು. ಯಾವುದೇ ಕವಿಯ ಸಾಹಿತ್ಯ ಆತನ ಆಳವಾದ ಮತ್ತು ವಿಶಾಲವಾದ ಅನುಭವದಿಂದ ಹಾಗೂ ಅಂದಿನ ಕಾಲಮಾನದ ಪರಿಸ್ಥಿತಿಗೆ ಹೊಂದಿಕೊಂಡಂತೆ ಇರುತ್ತದೆ. ಕವಿ ತನ್ನದೇ ಆದ ದೃಷ್ಟಿಕೋನದಿಂದ ಕಾವ್ಯವನ್ನು ರಚಿಸಿರುತ್ತಾನೆ. ಬಹುಶಃ ವಿಮರ್ಶಕನಿಗೆ ಅದರ ಅರಿವು ಸಂಪೂರ್ಣವಾಗಿ ಇರದಿರಬಹುದು. ಉದಾಹರಣೆಗೆ ಈ 'ಯಶೋಧರ ಚರಿತೆ'ಯ ಬಗೆಗೆ ಪ್ರೊ. ಗಿರಡ್ಡಿ ಗೋವಿಂದರಾಜ ಅವರು ಮಾಡಿರುವ ವಿಮರ್ಶೆಗೂ ಮತ್ತೊಬ್ಬ ವಿಮರ್ಶಕ ಪ್ರೊ. ಜಿ. ರಾಜಶೇಖರ ಮಾಡಿರುವ ವ್ಯಾಖ್ಯಾನಕ್ಕೂ ಬಹಳ ವ್ಯತ್ಯಾಸ ಕಂಡುಬರುತ್ತದೆ.




ಒಂದು ಹೆಣ್ಣಿನ ವಿಚಾರವಾಗಿ ಅಂದಿನ ದಿನಗಳಲ್ಲಿ ಇದ್ದ 'ಆಧುನಿಕ ಪ್ರಜ್ಞೆ' ಇದರ ವಿಚಾರವಾಗಿ ಅವಲೋಕಿಸಿದರೆ, ಈ 'ಯಶೋಧರ ಚರಿತೆ'ಯಲ್ಲಿ ನಾವು ಕಾಣುವುದು ಒಬ್ಬ ಶೋಷಿತ ಹೆಣ್ಣು. ಅಂದಿನ ದಿನಮಾನಗಳಲ್ಲಿ ಇದ್ದಂತಹ ಬಿಗಿಯಾದ ಚೌಕಟ್ಟಿನ ವಿರುದ್ಧ ತನ್ನ ಪ್ರತಿಭಟನೆಯನ್ನು ಧೈರ್ಯವಾಗಿ ಮತ್ತು ನಿಸ್ಸಂಕೋಚವಾಗಿ ವ್ಯಕ್ತಪಡಿಸಿರುವುದೇ ಅಮೃತಮತಿ ಪಾತ್ರದ ಸೃಷ್ಟಿ. ಆಗಿನ ಸಂದರ್ಭದಲ್ಲಿ ಸ್ತ್ರೀ ಸ್ವಾತಂತ್ರ್ಯ ವಾದವನ್ನು ಬಲವಾಗಿ ಹೇರಲು ಹೋದಾಗ ಪರಿಣಾಮ ಆದದ್ದು ಚಂದ್ರಮತಿಯ ಮೇಲೆ. ಅಂದರೆ ಮಹಾರಾಣಿಯ ಬಗೆಗೆ ತೆಗೆದುಕೊಳ್ಳುವ ನಿಲುವು ವ್ಯತಿರಿಕ್ತವಾಗಿ ಸಮಾಜದ ಇನ್ನಿತರ ಕೆಳದರ್ಜೆಯ ವ್ಯಕ್ತಿಗಳ ಅಭಿವ್ಯಕ್ತಿ ಮತ್ತು ಆಶೋತ್ತರಗಳ ಮೇಲೆ ಗಾಢವಾದ ಪರಿಣಾಮಗಳನ್ನು ಬೀರುವ ಸನ್ನಿವೇಶವನ್ನು ಈ ಚರಿತೆ ಪ್ರಮುಖವಾಗಿ ಬಿಂಬಿಸಿದಂತೆ ತೋರುತ್ತದೆ. ಅನೇಕ ವೇಳೆ ಈ ಸನ್ನಿವೇಶ ನಮಗೆ ಮಾನಸಿಕವಾಗಿ ಗಮನಹರಿಸುವಂತೆ ಮಾಡುತ್ತದೆ. ಅರಸನಾಗಿದ್ದರೆ ಯಾವ ಕಟ್ಟುಪಾಡುಗಳೂ ಇಲ್ಲ. ಆತನ ಮದುವೆಗೆ ಜಾತಿ, ಮತ, ಪಂಥ, ಮೇಲು, ಕೀಳು ಎಂಬ ಅಂಶವೆಲ್ಲಾ ಗೌಣವಾಗಿಬಿಡುತ್ತದೆ. ಆದರೆ ಅದೇ ಹೆಣ್ಣು ತನ್ನ ಎಲ್ಲಾ ಆಶೋತ್ತರ, ಸಂಸ್ಕೃತಿಗಳನ್ನು ಬಲಿಪಶುವನ್ನಾಗಿಸುವ ಸನ್ನಿವೇಶದ ನಿರ್ಮಾಣವನ್ನು ಈ ಯಶೋಧರ ಚರಿತದಲ್ಲಿ ಕವಿ ಬಹಳ ಮಾರ್ಮಿಕವಾಗಿ ಬಿಂಬಿಸಿದ್ದಾನೆ" ಎಂದರು.

ಕೆಲವು ಆಸಕ್ತ ಸಭಿಕರ ಅನಿಸಿಕೆಗಳಿಗೆ ಸಮಂಜಸವಾದ ಉತ್ತರಗಳನ್ನು ನೀಡಿ, ಉಂಟಾಗಿದ್ದ ಸಂದೇಹವನ್ನು ನಿವಾರಿಸಿ, ತಮ್ಮ ಉಪನ್ಯಾಸವನ್ನು ಪ್ರೊ. ಎಸ್.ಪಿ. ಅಜಿತ್ ಪ್ರಸಾದ್ ಅವರು ಮುಗಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ಮಾತನಾಡುತ್ತಾ "ಯಶೋಧರ ಚರಿತೆ ಒಂದು ರೀತಿ ಆಗಿನ ದಿನಮಾನಗಳಲ್ಲಿದ್ದ 'ಸಮಾಜದ ಧರ್ಮ' ಮತ್ತು ಅದರ ಪರಿಪಾಲನೆಯಲ್ಲಿ ಉಂಟಾಗಬಹುದಾದ ಸಂದಿಗ್ಧ ಪರಿಸ್ಥಿತಿಗಳ ಚಿತ್ರವನ್ನು ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಿದ ಮಹಾಕಾವ್ಯ. ಆಗಿದ್ದ ಪರಿಸ್ಥಿತಿ ಈಗಲೂ ಮಾನ್ಯ. ಬಿ.ಎಂ.ಶ್ರೀ. ಮತ್ತು ಕುವೆಂಪು ಅವರ ಸಾಹಿತ್ಯದ ವಿಚಾರಗಳನ್ನು ಹೋಲಿಸಿ ನೋಡಬೇಕಾಗುತ್ತದೆ. 'ಜೈನ ಸಾಹಿತ್ಯ' ಅಪಾರವಾದ ಸಂದೇಶಗಳನ್ನು ಸಮಾಜಕ್ಕೆ ನೀಡಿದ ಅಮೂಲ್ಯ ಗ್ರಂಥ. ಪ್ರೊ. ಎಸ್.ಪಿ. ಅಜಿತ್ ಪ್ರಸಾದ್ ಅವರು ಬಹಳ ಮನಮುಟ್ಟುವಂತೆ ತಮ್ಮದೇ ಆದ ದೃಷ್ಟಿಕೋನದಿಂದ 'ಯಶೋಧರ ಚರಿತೆ'ಯ ಬಗೆಗೆ ಇಂದು ಉಪನ್ಯಾಸ ನೀಡಿ ನಮ್ಮೆಲ್ಲರ ಮನದಲ್ಲಿ 'ಯಶೋಧರ ಚರಿತೆ'ಯ ವಿಚಾರಧಾರೆಗಳ ಬಗೆಗೆ ಮೆಲುಕು ಹಾಕುವಂತೆ ಮಾಡಿದ್ದಾರೆ. ಅವರಿಗೆ ಅಭಿನಂದನೆಗಳು" ಎಂದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕೋಶಾಧಿಕಾರಿಗಳಾದ ಪ್ರೊ. ಚಂದ್ರಶೇಖರ ನಾದೂರು ವಂದನಾರ್ಪಣೆ ಮಾಡಿದರು.

## ದಿನಾಂಕ ೧೪/೦೨/೨೦೨೬ ಶನಿವಾರ ಸಂಜೆ
## 'ಪಂಡಿತ್ ಓ.ಆರ್. ರಾಮಣ್ಣ, ಶ್ರೀಮತಿ ಪುಟ್ಟಮ್ಮ ದತ್ತಿ ಉಪನ್ಯಾಸ' ಜರುಗಿತು.

**'ಜೈಮಿನಿ ಭಾರತ': ಸ್ತ್ರೀಪರ ನೋಟಗಳು ವಿಷಯ ಕುರಿತು ಡಾ. ಶಿವಾನಂದ ಟವಳಿ, ಪ್ರಾಧ್ಯಾಪಕರು, ಕ್ರೈಸ್ಟ್ ಕಾಲೇಜು, ಇವರು ವಿಚಾರ ಮಂಡಿಸಿದರು.**

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು 'ಪಂಡಿತ್ ಓ.ಆರ್. ರಾಮಣ್ಣ, ಶ್ರೀಮತಿ ಪುಟ್ಟಮ್ಮ ದತ್ತಿ'ಯ ಕಿರುಪರಿಚಯ ನೀಡಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ಎಲ್ಲರನ್ನೂ ಸ್ವಾಗತಿಸಿ, ಉಪನ್ಯಾಸಕ ಡಾ. ಶಿವಾನಂದ ಟವಳಿ ಹಾಗೂ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಸ್.ಎಲ್. ಮಂಜುನಾಥ ಇವರುಗಳ ಪರಿಚಯ ಮಾಡಿಕೊಟ್ಟರು.

ಉಪನ್ಯಾಸಕ ಡಾ. ಶಿವಾನಂದ ಟವಳಿ ಅವರು ಮಾತನಾಡುತ್ತಾ ಪ್ರಾರಂಭದಲ್ಲಿ 'ಜೈಮಿನಿ ಭಾರತದ' ಉಗಮದ ಬಗೆಗೆ ಒಂದು ಕಿರುನೋಟವನ್ನು ನೀಡಿದರು.

ರಾಮಾಯಣ ಮತ್ತು ಮಹಾಭಾರತದಂತಹ ಕೃತಿಗಳಲ್ಲಿನ ಮೇರು ಸನ್ನಿವೇಶಗಳು ಇಲ್ಲಿ ಯತಾವತ್ತಾಗಿ ಮೂಡಿಬಂದಿವೆಯೇ ಎಂದು ಅವಲೋಕಿಸಬೇಕಿದೆ. ರಾಜಕೀಯ, ಸಾಮಾಜಿಕ ಸ್ಥಿತಿಗತಿಗಳ ನೆಲೆಗಟ್ಟಿನಲ್ಲಿ ನೋಡುವುದಾದರೆ, ಜೈಮಿನಿ ಭಾರತದಲ್ಲಿ ಪುರುಷ ಪ್ರಧಾನ ಸನ್ನಿವೇಶದಲ್ಲಿ ಸ್ತ್ರೀ ಪಾತ್ರಗಳು ನಿರ್ಮಿತವಾಗಿರುವುದನ್ನು ಗಮನಿಸಬಹುದು. ಸ್ತ್ರೀ ಪಾತ್ರಗಳು ಅಂದಾಗ, ದಾಂಪತ್ಯ ಜೀವನದ ಮತ್ತು ದೈನಂದಿಕ ವ್ಯವಹಾರಗಳಲ್ಲಿ ಸ್ತ್ರೀಯರ ಪಾತ್ರಗಳನ್ನು ಗಮನಿಸಬೇಕಾಗುತ್ತದೆ. ಪುರುಷರದ್ದೇ ಮೇಲುಗೈ ಇದ್ದಾಗ ಹೆಣ್ಣಿನ ತ್ಯಾಗ, ಸಹನೆ, ಸಹಿಷ್ಣುತೆ, ತಾಳ್ಮೆ ಮುಂತಾದವುಗಳ ಮೇಲೆ ಬೆಳಕು ಚೆಲ್ಲಿದರು. ಕಾವ್ಯದ ಕೆಲವು ಭಾಗಗಳನ್ನು ಉಲ್ಲೇಖಿಸಿ, ಸೀಮಿತವಾದ ಸ್ತ್ರೀ ಸ್ವಾತಂತ್ರ್ಯ ಇದ್ದಾಗಲೂ, ಸ್ತ್ರೀ ಪರ ಸನ್ನಿವೇಶಗಳನ್ನು ಅಲ್ಲಲ್ಲಿ ಕಾಣಬಹುದು ಎಂದರು. ಏನೇ ಆಗಲಿ ಈ ಕಾವ್ಯದಲ್ಲಿ ನಾವು ಮುಖ್ಯವಾಗಿ ಗಣನೆಗೆ ತೆಗೆದುಕೊಳ್ಳಬೇಕಾದ್ದು. ಅಂದಿನ ಸ್ತ್ರೀಯರು ಆದರ್ಶಪ್ರಾಯರಾಗಿದ್ದರು ಮತ್ತು ಇದರ ಅಗತ್ಯವೂ ಇತ್ತು ಎನ್ನುವಂತದ್ದು.

ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಪ್ರಾಧ್ಯಾಪಕರಾದ ಡಾ. ಎಸ್.ಎಲ್. ಮಂಜುನಾಥ ಅವರು ಮಾತನಾಡುತ್ತಾ, ಮೊದಲಿಗೆ ಇಂತಹ ವಿಷಯಗಳ ಮೇಲೆ ಗಮನ ಸೆಳೆಯಲು ದತ್ತಿ ಸ್ಥಾಪಿಸಿರುವ ಡಾ. ಆರ್. ಲಕ್ಷ್ಮೀನಾರಾಯಣ ಅವರನ್ನು ಅಭಿನಂದಿಸಿದರು. ಜೊತೆಗೆ ಇಂದಿನ ಉಪನ್ಯಾಸಕರಾದ ಡಾ. ಶಿವಾನಂದ ಟವಳಿ ಅವರು 'ಜೈಮಿನಿ ಭಾರತ'ದಲ್ಲಿ ಮೂಡಿಬಂದಿರುವ ಅನೇಕ ಸ್ತ್ರೀಯರ ಪಾತ್ರಗಳನ್ನು ಹೆಕ್ಕಿ, ಅಂದಿನ ಪರಿಸ್ಥಿತಿಗೆ ತಕ್ಕ ಹಾಗೆ ಕವಿಯು ಪುರುಷ ಪ್ರಧಾನ ಸನ್ನಿವೇಶದಲ್ಲೂ, ಹೆಣ್ಣು ನಡೆದುಕೊಂಡ ರೀತಿಯನ್ನು ಸೃಷ್ಟಿಸಿದ್ದಾನೆ ಎಂಬ ವಿಚಾರವನ್ನು ವ್ಯಕ್ತಪಡಿಸಿದ್ದಾರೆ ಎಂದು ಸಂತೋಷ ವ್ಯಕ್ತಪಡಿಸಿದರು.

ಕವಿ ಲಕ್ಷ್ಮೀಶನ ಕಾವ್ಯದಲ್ಲಿ ಬರುವ ಸ್ತ್ರೀಯರ ಚಿಂತನೆ ಮತ್ತು ವ್ಯವಹಾರಗಳನ್ನು ಆಳವಾಗಿ ಅರ್ಥೈಸಿಕೊಂಡ ಅವರ 'ಸ್ತ್ರೀ ಪರ ನೋಟ' ಮೆಚ್ಚುವಂತದ್ದು ಎಂದರು.

ನನ್ನ ದೃಷ್ಟಿಯಲ್ಲಿ ಲಕ್ಷ್ಮೀಶ ಬಹಳ ಬುದ್ಧಿವಂತ ಕವಿ. ಕುಮಾರವ್ಯಾಸ ಮತ್ತಿತರರು ಮಹಾಭಾರತವನ್ನು ಬರೆದಿದ್ದರೂ, ಕವಿ ಲಕ್ಷ್ಮೀಶನಿಗೆ ಎಲ್ಲೋ ಒಂದು ಕಡೆ ಕೆಲವು ವಿಷಯಗಳು ಸ್ಪಷ್ಟವಾಗಿ ಮೂಡಿಲ್ಲ ಎಂಬ ಅನಿಸಿಕೆ ಉಂಟಾಗಿರಬಹುದು. ಮಹಾಭಾರತ ಎಂದರೆ ಕೇವಲ ಕುರುಕ್ಷೇತ್ರ ಯುದ್ಧಕ್ಕೆ ಸೀಮಿತವಲ್ಲ ಎಂದು ಮನಗಂಡು ಅನೇಕ ಪಾತ್ರಗಳನ್ನು ಮತ್ತು ಸನ್ನಿವೇಶಗಳನ್ನು ಷಟ್ಪದಿಯ ರೂಪದಲ್ಲಿ ಬರೆದು ತನ್ನದೇ ಆದ ಛಾಪನ್ನು ನಿರ್ಮಿಸಿದ್ದಾನೆ ಅನ್ನಬಹುದು. ಅದರಲ್ಲಿ ಅವನ ಸ್ತ್ರೀಪರ ಸಂವೇದನೆಯನ್ನು ವಿಶೇಷವಾಗಿ ಕಾಣಬಹುದು" ಎಂದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರು ವಂದನಾರ್ಪಣೆ ಮಾಡಿದರು.



## ದಿನಾಂಕ ೧೫/೦೨/೨೦೨೬ ಭಾನುವಾರ ಬೆಳಗ್ಗೆ 'ಶ್ರೀ ಮೋಹನ್ ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ' ಅವರು ಸ್ಥಾಪಿಸಿರುವ 'ಶ್ರೀಮತಿ ರುಕ್ಮಿಣಿದೇವಿ ಅರುಂಡೇಲ್ ದತ್ತಿಯ ಆಶಯದಂತೆ ೧೦ ರಿಂದ ೧೬ ವರ್ಷ ವಯಸ್ಸಿನ ಮಕ್ಕಳಿಗಾಗಿ ಭರತನಾಟ್ಯ ಸ್ಪರ್ಧೆ ಆಯೋಜಿಸಲಾಗಿತ್ತು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಅವರು ದತ್ತಿಯ ರೂಪುರೇಷೆಗಳು ಮತ್ತು ಉಗಮದ ಕಿರುಪರಿಚಯ ನೀಡಿ ಕಾರ್ಯಕ್ರಮದ ನಿರೂಪಣೆ ಮಾಡಿದರು.

ಸ್ವಾಗತದ ಮಾತುಗಳನ್ನು ಆಡುತ್ತಾ, "ಶ್ರೀ ಮೋಹನ್ ದೇವ್ ಆಳ್ವ ಅವರಿಗೆ ನಮ್ಮ ಸಂಸ್ಥೆಯ ಬಗ್ಗೆ ಅಪಾರವಾದ ಗೌರವ ಮತ್ತು ವಿಶ್ವಾಸ ಇದ್ದು ಅವರು ಸಾಕಷ್ಟು ದತ್ತಿಗಳನ್ನು ಸ್ಥಾಪಿಸಿದ್ದಾರೆ. ಅವೆಲ್ಲವುಗಳ ಮೂಲ ಉದ್ದೇಶವನ್ನು ಗಮನಿಸಿದರೆ, ಆಳ್ವ ಅವರ ಮುತ್ಸದ್ದಿತನ ವ್ಯಕ್ತವಾಗುತ್ತದೆ. ನಾನಾ ಕ್ಷೇತ್ರಗಳಲ್ಲಿ ಅಭಿನಂದನೀಯ ಕಾರ್ಯ ಮಾಡಿರುವ ಮಹನೀಯರನ್ನು ಮರೆಯದೇ ನೆನಪು ಮಾಡಿಕೊಳ್ಳುವುದು ಮತ್ತು ಈ ಮೂಲಕ ಆಯಾ ಕ್ಷೇತ್ರಗಳಲ್ಲಿ ಯುವಪೀಳಿಗೆಗೆ ಸ್ಪರ್ಧೆಗಳನ್ನು ಏರ್ಪಡಿಸಿ ಉತ್ತೇಜಿಸುವುದು–ಹೀಗೆ ಉದಾತ್ತ ಮನಸ್ಸಿನಿಂದ ಅವರ ಎಲ್ಲಾ ದತ್ತಿ ಕಾರ್ಯಕ್ರಮಗಳಲ್ಲೂ ಈ ಇಳಿ ವಯಸ್ಸಿನಲ್ಲಿ ಲವಲವಿಕೆಯಿಂದ ಭಾಗಿಯಾಗಿ, ಕಾರ್ಯಕ್ರಮ ಶಿಸ್ತಿನಿಂದ, ಕ್ರಮಬದ್ಧವಾಗಿ ಸಂಪೂರ್ಣವಾದಾಗ ಸಾರ್ಥಕ ಮನೋಭಾವದಿಂದ ಖುಷಿಪಡುತ್ತಾರೆ. ಇಂತಹ ವ್ಯಕ್ತಿತ್ವ ಕಂಡುಬರುವುದು ಅಪರೂಪ ಮತ್ತು ನಮ್ಮ ಪ್ರತಿಷ್ಠಾನದ ಸೌಭಾಗ್ಯ" ಎಂದರು.

ಪ್ರಾರ್ಥನಾ ಗೀತೆ ಮತ್ತು ಜ್ಯೋತಿ ಬೆಳಗುವುದರೊಂದಿಗೆ ಭರತನಾಟ್ಯ ಸ್ಪರ್ಧೆಗೆ ಹಸಿರು ನಿಶಾನೆ ತೋರಿಸಲಾಯಿತು. ವೇದಿಕೆಯ ಮೇಲೆ ಉಪಸ್ಥಿತರಿದ್ದ ತೀರ್ಪುಗಾರರು ಸ್ಪರ್ಧಾಳುಗಳಿಗೆ ನಿಯಮಗಳ ಬಗೆಗೆ ತಿಳಿವಳಿಕೆ ನೀಡಿದರು.

ಮುಖ್ಯ ಅತಿಥಿಗಳಾಗಿದ್ದ ಶ್ರೀ ಮೋಹನ್ ದೇವ್ ಆಳ್ವ ಅವರು ಸ್ಪರ್ಧಾಳುಗಳಿಗೆ ಪ್ರೋತ್ಸಾಹದಾಯಕ ಮಾತುಗಳನ್ನು ಆಡಿದರು.

ಮೂವತ್ತಮೂರು ಸ್ಪರ್ಧಿಗಳು ಒಬ್ಬರಿಗೊಬ್ಬರು ತೀರ್ಪುಗಾರರಿಗೆ 'ಯಾರು ಪ್ರತಿಭಾವಂತರು ಈ ಮೂವತ್ತಮೂರರೊಳಗೆ' ಅನ್ನುವ ಸಮಸ್ಯೆ ಉಂಟುಮಾಡುವಂತೆ ನೃತ್ಯ ಪ್ರದರ್ಶನ ಮಾಡಿದರು. ತಮ್ಮ ನೃತ್ಯದ ಸನ್ನಿವೇಶಕ್ಕೆ ತಕ್ಕಂತೆ ವೇಷಭೂಷಣ ಧರಿಸಿದ್ದು ಅವರ ನರ್ತನಕ್ಕೆ ಮತ್ತಷ್ಟು ಮೆರಗು ತಂದುಕೊಟ್ಟಿತ್ತು. ತೀರ್ಪುಗಾರರು, ತಾಳಮೇಳ, ಹಾವಭಾವ, ನಯನಗಳ ಚಲನ, ಅಭಿವ್ಯಕ್ತಿ ಮುಂತಾದ ಅಂಶಗಳನ್ನು ಪರಿಗಣಿಸಿ ತೀರ್ಪು ನೀಡಿರುವುದಾಗಿ ತಿಳಿಸಿದರು. ಭಾಗವಹಿಸಿದ್ದ ಎಲ್ಲಾ ಸ್ಪರ್ಧಿಗಳಿಗೂ ಪ್ರಮಾಣ ಪತ್ರ ನೀಡಲಾಯಿತು.

ಈ ಕೆಳಕಂಡ ಸ್ಪರ್ಧಿಗಳು ನಗದು ಬಹುಮಾನಕ್ಕೆ ಭಾಜನರಾದರು:

ಪ್ರಥಮ: ಎಸ್. ಧೃತಿ ಪ್ರಸಾದ್
ದ್ವಿತೀಯ: ಸಾನ್ವಿಕ ಡಿ. ಜೈನ್
ತೃತೀಯ: ಐಶ್ವರ್ಯ ವಿ.ಆರ್. ಮತ್ತು ತನಿಷ್ಕ ಎಂ.
ಸಮಾಧಾನಕರ: ಶರಣ್ಯ ಪ್ರಸಾದ್
ವಿಶೇಷ ಬಹುಮಾನ : ತೇಜಸ್ವಿನಿ ಸೋಮಣ್ಣ ಭೋವಿ (ವಯಸ್ಸು ೭)

ಶ್ರೀಮತಿ ರುಕ್ಮಿಣಿದೇವಿ ಅರುಂಡೇಲ್ ಅವರ ಶಿಷ್ಯರ ಶಿಷ್ಯೆಯಾದ ಶ್ರೀಮತಿ ತನುಜಾ ಜೈನ್ ಡಿ. ಮತ್ತು ಶ್ರೀಮತಿ ಅನಿಕಾ ಕಿರಣಕುಂಬಮ್ ಇವರು ತೀರ್ಪುಗಾರರಾಗಿದ್ದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು ಬಹುಮಾನ ವಿತರಣೆಗೆ ಮುನ್ನ ತಮ್ಮ ಅನಿಸಿಕೆಗಳನ್ನು ಅರುಹಿದರು. ಇವತ್ತಿನ ಕಾರ್ಯಕ್ರಮದಲ್ಲಿ ಒಟ್ಟು ೩೩ ಸ್ಪರ್ಧಿಗಳು ಭಾಗವಹಿಸಿದ್ದರು, ಇದರಲ್ಲಿ ಕೆಲವರು ಸ್ವಇಚ್ಛೆಯಿಂದ ಭರತನಾಟ್ಯವನ್ನು ಕಲಿಯುತ್ತಿರಬಹುದು, ಇನ್ನು ಕೆಲವರು ತಮ್ಮ ತಂದೆ ತಾಯಿಗಳ, ಕುಟುಂಬದ ಇತರ ಸದಸ್ಯರ ಅಥವಾ ಇನ್ನಿತರರ ಪ್ರೋತ್ಸಾಹದಿಂದ ಕಲಿಯುತ್ತಿರಬಹುದು. ಏನೇ ಆಗಲಿ, ತಾವೂ ಕಲಿತು ಮುಂದೆ ಒಂದು ದಿನ ಹೆಸರಾಂತ ನೃತ್ಯಪಟುವಾಗಬೇಕು, ನಾಟ್ಯ ಸಾಧನೆ ಮಾಡಬೇಕು ಎಂಬ ಮಹಾದಾಸೆಯನ್ನು ಹೊಂದಿರುತ್ತಾರೆ. ದೇಶದಲ್ಲಿ ಹೆಸರು ಗಳಿಸಿ, ವಿದೇಶಗಳ ವೇದಿಕೆಗಳ ಮೇಲೂ ತಮ್ಮ ಪ್ರದರ್ಶನ ನೀಡುವ ಅವಕಾಶ ಮತ್ತು ಅನುಕೂಲಗಳು ಇಂದು ಲಭ್ಯವಿದೆ. ಈ ದಿಶೆಯಲ್ಲಿ ಎಲ್ಲರಿಗೂ ಶುಭವಾಗಲಿ ಎಂದು ಹಾರೈಸಿದರು.

ವಂದನಾರ್ಪಣೆಯೊಂದಿಗೆ ಸ್ಪರ್ಧಾ ಕಾರ್ಯಕ್ರಮ ಮುಕ್ತಾಯವಾಯಿತು.










## ದಿನಾಂಕ ೧೯/೦೨/೨೦೨೬ ಗುರುವಾರ ಸಂಜೆ 'ಆ.ನೇ. ಉಪಾಧ್ಯೆ – ಡಿ.ಎಲ್.ಎನ್. –ಎಂ.ಜಿ. ನಂಜುಂಡಾರಾಧ್ಯ– ಸೋಸಲೆ ಅಯ್ಯಾಶಾಸ್ತ್ರೀ ಸಂಯೋಜಿತ ದತ್ತಿ'ಯ ಭಾಗವಾಗಿ ನಿವೃತ್ತ ಪ್ರಾಧ್ಯಾಪಕರು ಮತ್ತು ಸಂಶೋಧಕರಾದ ಡಾ. ಎನ್.ಆರ್.ಲಲಿತಾಂಬ 'ಆ.ನೇ. ಉಪಾಧ್ಯೆ ಅವರ ಸಾಹಿತ್ಯ' ವಿಷಯದ ಮೇಲೆ ಮಾತನಾಡಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ಅವರು ದತ್ತಿಯ ಮತ್ತು ಉಪನ್ಯಾಸಕಿ ಡಾ. ಎನ್.ಆರ್. ಲಲಿತಾಂಬಇವರ ಕಿರುಪರಿಚಯ ಮಾಡಿ ಎಲ್ಲರನ್ನೂ ಸ್ವಾಗತಿಸಿದರು.

ಡಾ. ಎನ್.ಆರ್. ಲಲಿತಾಂಬ ಅವರು ಪ್ರಾರಂಭದಲ್ಲಿ, "ಇವತ್ತಿನ ದತ್ತಿ ಯಾರ ಹೆಸರಲ್ಲಿದೆಯೋ ಅವರೆಲ್ಲ ಅಂದರೆ ಡಿ.ಎಲ್.ಎನ್. – ಎಂ.ಜಿ. ನಂಜುಂಡಾರಾಧ್ಯ – ಸೋಸಲೆ ಅಯ್ಯಾಶಾಸ್ತ್ರಿ, ಇವರೆಲ್ಲರೂ ಆ.ನೇ. ಉಪಾಧ್ಯೆ ಅವರ ಸರಿಸಮಾನರು. ಶಾಸ್ತ್ರೀಯ ಕನ್ನಡವನ್ನು ಕಟ್ಟಿ ಬೆಳೆಸಿದ ಮಹಾನ್ ವ್ಯಕ್ತಿಗಳು. ಇವರೆಲ್ಲಾ ಆಳವಾದ ಜ್ಞಾನ ಮತ್ತು ಪರಿಪಕ್ವತೆ ಹೊಂದಿದ ಅಗ್ರಮಾನ್ಯರು. ಮುಂದಿನ ಪೀಳಿಗೆಗೆ ಅಧ್ಯಯನ ಮಾಡಲು ಅಗಾಧವಾದ ಸಾಮಗ್ರಿಗಳನ್ನು ಕೊಟ್ಟ ಧೀಮಂತರು. ಇವರ ಹೆಸರಿನ ದತ್ತಿಯ ಆಶ್ರಯದಲ್ಲಿ 'ಆ.ನೇ. ಉಪಾಧ್ಯೆ ಅವರ ಸಾಹಿತ್ಯ' ಎಂಬ ವಿಷಯದ ಮೇಲೆ ಮಾತನಾಡುವುದು ನನಗೆ ಸಿಕ್ಕ ಒಂದು ಅಪೂರ್ವ ಸದವಕಾಶ ಎಂದರು. ಆ.ನೇ. ಉಪಾಧ್ಯೆ ಅವರು ಸಾಹಿತ್ಯದ ಅನೇಕಾನೇಕ ಪದರಗಳಲ್ಲಿ ಹಿಡಿತವನ್ನು ಸಾಧಿಸಿ, ಭಾರತದಲ್ಲಿ ಅಷ್ಟೇ ಅಲ್ಲ, ವಿಶ್ವದ ಉದ್ದಗಲಕ್ಕೂ ಪಾಂಡಿತ್ಯದ ಗತ್ತಿನಿಂದ ಮಾತನಾಡಬಲ್ಲ, 'ಸೈ' ಎಂದು ಗುರುತಿಸಿಕೊಂಡ ಮೇಧಾವಿ. ಕುವೆಂಪು ಅವರು ಆ.ನೇ. ಉಪಾಧ್ಯೆ ಅವರನ್ನು 'ಆಳವಾದ ಸಮುದ್ರ'ಕ್ಕೆ ಹೋಲಿಸಿ ಬರೆದಿದ್ದಾರೆ. ಅಷ್ಟೊಂದು ಅಧ್ಯಯನ ಮಾಡಿ ಅಷ್ಟೇ ಆಳವಾದ ವಿಷಯ ಸಂಗ್ರಹಣೆ ಮಾಡುವುದು ಎಂದರೆ ಅವರ ಆಸಕ್ತಿ ಮತ್ತು ಅಭಿರುಚಿ ಸಾಹಿತ್ಯದಲ್ಲಿ ವಿಶ್ವಮಾನ್ಯವಾದದ್ದು. ಜೈನ ಶಾಸ್ತ್ರ ಮತ್ತು ಪ್ರಾಕೃತಿಕ ಅಧ್ಯಯನದಲ್ಲಿ ತೊಡಗಿಸಿಕೊಂಡು ಅದನ್ನು ಪ್ರಖರವಾಗಿ ಭುವಿಯ ಉದ್ದಗಲಕ್ಕೂ ಪಸರಿಸಿದವರು ಆ.ನೇ. ಉಪಾಧ್ಯೆ ಅವರು. ಅವರ ಸಾಹಿತ್ಯ ಮೇರು ಪರ್ವತದಷ್ಟೇ ಉತ್ಕೃಷ್ಟವಾದದ್ದು. ಅವರು ಎಷ್ಟೊಂದು ನಿಪುಣ ಅಧ್ಯಾಪಕರಾಗಿ ತಮ್ಮ ವಿದ್ಯಾರ್ಥಿಗಳಿಗೆ ಜ್ಞಾನ ದಾಸೋಹವನ್ನು ಮಾಡಿದ್ದಾರೆ ಎನ್ನಲಿಕ್ಕೆ, ಅವರ ಅಪಾರವಾದ ವಿದ್ಯಾರ್ಥಿಗಳ ಸಮೂಹ ಆ.ನೇ. ಉಪಾಧ್ಯೆ ಅವರ ಬಗೆಗೆ ಬರೆದಿರುವ ಲೇಖನಗಳೇ ಸಾಕ್ಷಿ. ಅದು ಪಾಠ ಮಾಡುವ ವಿಷಯಗಳ ಮೇಲೆ ಅವರ ಹಿಡಿತ ಮತ್ತು ಅದನ್ನು ನಿರೂಪಿಸುವ ಕಲೆಗೆ ಸಂದ ಗೌರವ ಅನ್ನಬೇಕು.

ಭಾಷಾ ಸಾಹಿತ್ಯ, ಶಾಸನಗಳ ಅಧ್ಯಯನ ಮುಂತಾದವುಗಳ ಮೇಲೆ ಅವರ ಚಿಂತನೆ ಸ್ಫೂರ್ತಿದಾಯಕವಾಗಿತ್ತು. ಅವರ ಆಕರ ಗ್ರಂಥಗಳು ವಿದ್ಯಾರ್ಥಿಗಳಿಗೆ ಅದರಲ್ಲೂ ಸಂಶೋಧನಾಸಕ್ತರಿಗೆ ದಾರಿದೀಪವಾಗಿ ಮತ್ತು ಕೈಯನ್ನು ಹಿಡಿದು ನಡೆಸುವ ಅಮೋಘ ಸಾಧನವಾಗಿತ್ತು. ಅವರು ಕನ್ನಡ ಭಾಷೆ ಮತ್ತು ಸಾಹಿತ್ಯದ ಮೇಲೆ ಮಾತನಾಡುವ ತೇಜಸ್ಸು ಕೇಳುಗರನ್ನು ಮಂತ್ರಮುಗ್ಧರನ್ನಾಗಿ ಮಾಡುತ್ತಿತ್ತು.

ಅವರು ರಚಿಸಿದ ಜೈನ ಸಾಹಿತ್ಯ ಕನ್ನಡದ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ತೋರಿಸುತ್ತಿತ್ತು. ವಿಶ್ವದ ಧರ್ಮ ಸಮ್ಮೇಳನಗಳಲ್ಲಿ ಅವರು ಮಾಡುತ್ತಿದ್ದ ವಿವಿಧ ಧರ್ಮಗಳ ಸಾಹಿತ್ಯದ ಮೇಲಿನ ವಿದ್ವತ್ ಭಾಷಣಗಳು ಆ.ನೇ. ಉಪಾಧ್ಯೆ ಅವರ ಗಾಢವಾದ ಭಾಷಾ ಸಾಹಿತ್ಯದ ಬಗೆಗಿನ ಪರಿಪೂರ್ಣತೆಯನ್ನು ಬಿಂಬಿಸಿ ಅವರ ವರ್ಚಸನ್ನು ಇಮ್ಮಡಿಗೊಳಿಸುತ್ತಿತ್ತು. ಸಾಹಿತ್ಯದ ಮೂಲಕ್ಕೆ ಹೋಗಿ ಮಾತನಾಡುತ್ತಿದ್ದ ಅವರ ಭಾಷಣಗಳು ಅನೇಕರಿಗೆ ಪ್ರೇರಣೆಯನ್ನು ಕೊಟ್ಟಿರುವುದುಂಟು. ಒಟ್ಟಿನಲ್ಲಿ ಆ.ನೇ. ಉಪಾಧ್ಯೆ ಅವರ ಸಾಹಿತ್ಯವು ಸೌರಭವೂ ಹೌದು ಮತ್ತು ಸುಗಂಧಭರಿತವೂ ಹೌದು. ಅವರ ಅನೇಕ ಧರ್ಮಗಳ ಅದರಲ್ಲೂ ಜೈನ ಸಾಹಿತ್ಯವು ಭಾಷಾ ಸಾಹಿತ್ಯದ ಬಂಗಾರದ ಗಣಿ" ಎನ್ನುತ್ತಾ ತಮ್ಮ ಉಪನ್ಯಾಸವನ್ನು ಮುಗಿಸಿದರು. ಡಾ. ಎನ್.ಆರ್. ಲಲಿತಾಂಬ ಇವರ ಇಂದಿನ ಉಪನ್ಯಾಸ, ವಿಷಯಗಳ ಸಂಗ್ರಹಣೆಯಲ್ಲಿ, ಅದನ್ನು ಪ್ರತಿಪಾದಿಸುವಲ್ಲಿ ಮತ್ತು ಸ್ವಚ್ಛ ಉಚ್ಚಾರಣೆಯಿಂದ, ನಿಖರತೆಯಿಂದ ಕನ್ನಡ ಭಾಷೆಯಲ್ಲಿ ಉಪನ್ಯಾಸ ನೀಡುವುದಕ್ಕೆ 'ಮಾದರಿ'ಯಾಗಿತ್ತು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡರು ಅಧ್ಯಕ್ಷೀಯ ಭಾಷಣ ಮಾಡುತ್ತಾ ಆ.ನೇ. ಉಪಾಧ್ಯೆ ಅವರ ಸಾಹಿತ್ಯದ, ವಿದ್ವತ್ತಿನ ಮೌಲ್ಯಮಾಪನ ಮಾಡುವುದು ಅಷ್ಟು ಸುಲಭವಲ್ಲ ಎಂದು ಹೇಳಿ ಎ.ಕೆ. ರಾಮಾನುಜನ್ ಅವರ ಅಂಗುಲ ಹುಳುವಿನ ಪರಕಾಯ ಪ್ರವೇಶ ಪದ್ಯವನ್ನು ಉಲ್ಲೇಖಿಸಿದರು. ಆ.ನೇ. ಉಪಾಧ್ಯೆ ಅವರ ಸಾಹಿತ್ಯದ ವಿಸ್ತಾರವನ್ನು ಅಂಗುಲದ ಲೆಕ್ಕದಲ್ಲಿ ಅಳೆಯುವುದು ದುಸ್ತರ. ಇಂದಿನ ಸಂಶೋಧನಾ ಗ್ರಂಥಗಳನ್ನು ಓದಿ, ಅದನ್ನು ಆ.ನೇ. ಉಪಾಧ್ಯೆ ಅವರ ಸಾಹಿತ್ಯದ ಜೊತೆಗೆ ಹೋಲಿಸಿದರೆ ನಮ್ಮ ಮಟ್ಟ ಯಾವುದು ಅನ್ನುವುದು ಗೊತ್ತಾಗುತ್ತದೆ. ಸಾಹಿತ್ಯವಲ್ಲದೆ ಅವರ ವ್ಯಕ್ತಿತ್ವದ ಬಗೆಗೂ ಮಾತನಾಡಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆ.ನೇ. ಉಪಾಧ್ಯೆ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದಾಗ ನಿರಾಕರಿಸಿ ನಂತರ ಒಪ್ಪಿಕೊಂಡ ಪ್ರಸಂಗವನ್ನು ನೆನಪಿಸಿದರು. ಆ.ನೇ. ಉಪಾಧ್ಯೆ ಅವರ ಸಾಹಿತ್ಯದ ಮೇಲೆ ಮಾತನಾಡಲಿಕ್ಕೆ ಡಾ. ಎನ್.ಆರ್. ಲಲಿತಾಂಬ ಅವರೇ ಸಾಟಿ ಎಂದು ಉಪನ್ಯಾಸಕರನ್ನು ಅಭಿನಂದಿಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕೋಶಾಧಿಕಾರಿಗಳಾದ ಪ್ರೊ. ಚಂದ್ರಶೇಖರ ನಾದೂರು ವಂದನಾರ್ಪಣೆ ಮಾಡುತ್ತಾ ಮೌಲ್ಯಯುತವಾದ ಉಪನ್ಯಾಸ ನೀಡಿದ ಡಾ. ಎನ್.ಆರ್. ಲಲಿತಾಂಬ ಅವರನ್ನು ಅಭಿವಂದಿಸಿದರು.



## ದಿನಾಂಕ ೨೧/೦೨/೨೦೨೬ ಶನಿವಾರ ಸಂಜೆ 'ಶ್ರೀಮತಿ ಎಲ್.ನಾಗಮಣಿ ಆರ್.ಲಕ್ಷ್ಮೀನಾರಾಯಣ ದತ್ತಿ (ಸಂಗೀತ)' ಪ್ರಯುಕ್ತ ಮೋದಕ್ ಎಂ., ಪರಿಶ್ರುತ್ ಹೆಚ್. ಮತ್ತು ಸೋಹಮ್ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿಗಳಾದ ಡಾ. ಶಾಂತರಾಜು ದತ್ತಿಯ ಕಿರುಪರಿಚಯ ನೀಡಿ ಕಲಾವಿದರನ್ನು ಹಾಗೂ ಸಭಿಕರನ್ನು ಸ್ವಾಗತಿಸಿದರು.

ಮೋದಕ್ ಎಂ., ಪರಿಶ್ರುತ್ ಹೆಚ್. ಮತ್ತು ಸೋಹಮ್ ಈ ಮೂವರೂ ಕಿಶೋರ ಪ್ರತಿಭೆಗಳು ವೇದಿಕೆಯನ್ನು ಅಲಂಕರಿಸಿದರು. ಈ ಮೂವರೂ ಖ್ಯಾತ ಕೊಳಲು ವಾದಕ ಪಂಡಿತ್ ಪ್ರವೀಣ್ ಗೋಡ್ಖಿಂಡಿ ಇವರ ಗರಡಿಯಲ್ಲಿ ಕಲಿತವರು. ಸೋಹಮ್ ತಬಲಾ ನುಡಿಸಿದರು.

ರಾಗ್ ಭೈರವ್‌ದೊಂದಿಗೆ 'ಜಾಗೋ ಮೋಹನ್' ಎಂಬ ತಮ್ಮ ಪ್ರಥಮ ಗಾಯನವನ್ನು ಗುರುಗಳಿಗೆ ಅರ್ಪಿಸಿ ಪ್ರಾರಂಭಿಸಿದರು. 'ಭವಹರ ಶಂಕರ ತಾಂಡವ', 'ಗಜಮುಖನೇ ಗಣನಾಥನೇ' ಮುಂತಾದ ಹಿಂದೂಸ್ತಾನಿ ಸಂಗೀತದ ಕೆಲವು ಪ್ರಮುಖ ರಾಗಗಳನ್ನು ಪ್ರಸ್ತುತ ಪಡಿಸಿದರು.

ದತ್ತಿ ಸ್ಥಾಪಿಸಿರುವ ಡಾ. ಆರ್. ಲಕ್ಷ್ಮೀನಾರಾಯಣ ಅವರು ತಮ್ಮ ಹಿರಿಯರನ್ನು ನೆನಪಿಸಿಕೊಂಡರು. ಇಂದು ಉತ್ತರಾದಿ ಸಂಗೀತವನ್ನು ಪ್ರಸ್ತುತಪಡಿಸಿದ ಕಿಶೋರ ಪ್ರತಿಭೆಗಳನ್ನು ಅಭಿನಂದಿಸಿದರು. 'ಬೆಳೆಯುವ ಪೈರು ಮೊಳಕೆಯಲ್ಲಿ' ಎಂಬ ನುಡಿಯನ್ನು ಉಲ್ಲೇಖಿಸುತ್ತಾ ಈ ಮೂವರೂ ಸಂಗೀತ ಪ್ರತಿಭೆಗಳು ಉತ್ತಮವಾಗಿ ಹಾಡಿ, ಮುಂದೆ ತಮಗೆ ಉಜ್ವಲ ಭವಿಷ್ಯವಿದೆ ಎಂದು ನಿರೂಪಿಸಿದ್ದಾರೆ. ಇವರಿಗೆ ಸರ್ವೋತ್ತರ ಅಭಿವೃದ್ಧಿಯಾಗಲಿ ಎಂದು ಶುಭ ಹಾರೈಸಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು ಮೂವರೂ ಸಂಗೀತ ಪ್ರತಿಭೆಗಳನ್ನು ಪುರಸ್ಕರಿಸಿದರು.

ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.




### ಹೊಸದಾಗಿ ಮತ್ತು ಹೆಚ್ಚುವರಿ ದತ್ತಿ ಸೇರ್ಪಡೆ ಮೊತ್ತದ ವಿವರ

ಶ್ರೀ ಮೋಹನ್ ದೇವ್ ಆಳ್ವ ಅವರು ಹೊಸದಾಗಿ ಕೆಲವು ದತ್ತಿಗಳನ್ನು ಸ್ಥಾಪನೆ ಮಾಡಿರುತ್ತಾರೆ.

| | | |
|---|---|---|
| 1. | ಡಾ. ದಿನಕರ ದೇಸಾಯಿ ದತ್ತಿ | 3,00,000/- |
| 2. | ಡಾ. ನಾಗಪ್ಪ ಆಳ್ವ ಮತ್ತು ಶ್ರೀಮತಿ ಕಲ್ಯಾಣಿ ಆಳ್ವ ದತ್ತಿ | 3,00,000/- |
| 3. | ಸಾ.ಪ. ಗಾಂವಕರ್ ದತ್ತಿ | 3,00,000/- |
| 4. | ಡಾ. ತೋನ್ಸೆ ಮಾಧವ ಅನಂತ ಪೈ ದತ್ತಿ | 3,00,000/- |
| 5. | ಡಾ. ಡಿ.ಎಸ್. ಕರ್ಕಿ ದತ್ತಿ | 1,00,000/- |
| 6. | ಡಾ. ವಿಷ್ಣುನಾಯ್ಕ ದತ್ತಿ | 1,00,000/- |
| 7. | ಶ್ರೀ ಕೋಟ ರಾಮಕೃಷ್ಣ ಕಾರಂತ ದತ್ತಿ | 1,00,000/- |
| 8. | ಶ್ರೀ ಕಾಂತಾವರ ಬೀಡು ಜಿನರಾಜ ಹೆಗ್ಗಡೆ ದತ್ತಿ | 1,00,000/- |

### ಕೆಳಗಿನ ದತ್ತಿಗಳಿಗೆ ಹೆಚ್ಚುವರಿ ಮೊತ್ತ ಸರ್ಪಡೆಯಾಗಿದೆ

| | | |
|---|---|---|
| 1. | ಎಸ್. ಶಿವಲಿಂಗಯ್ಯ, ಶಂಬಾಜೋಶಿ ದತ್ತಿ | 10,000/- |
| 2. | ಡಾ. ಪಿ.ವಿ.ನಾರಾಯಣ ದತ್ತಿ | 2,00,000/- |
| 3. | ಡಾ.ಎಂ.ಎ. ಜಯಚಂದ್ರ ದತ್ತಿ | 1,00,000/- |
| 4. | ಶ್ರೀಮತಿ ವಿಮಲಾ ಎ. ಮೂರ್ತಿ, ಸೂ.ವೆಂ.ಆರಗ ವಿಮರ್ಶಾಕೃತಿ ಪ್ರಶಸ್ತಿಗೆ | 3,00,000/- |

ಈ ಎಲ್ಲಾ ದತ್ತಿ ದಾನಿಗಳಿಗೂ ಅಭಿನಂದನೆಗಳು ಮತ್ತು ಧನ್ಯವಾದಗಳು



ಮುಂದುವರೆದ ಭಾಗ...

# ಬಿ.ಎಂ.ಶ್ರೀಕಂಠಯ್ಯ

## ೧೦. ಉಪಸಂಹಾರ

ಡಾ. ರಾಮೇಗೌಡ (ರಾಗೌ)

ಬಿ.ಎಂ.ಶ್ರೀ.ಯವರು ಕನ್ನಡದ ಅಮೂಲ್ಯ ಆಸ್ತಿ. ಅವರು ಒಬ್ಬ ಲೇಖಕ ಮಾತ್ರವಲ್ಲ; ಕನ್ನಡದ ಶಕ್ತಿಯಾಗಿದ್ದರು, ಸಂಸ್ಥೆಯಾಗಿದ್ದರು. ಅವರ ಸಾಹಿತ್ಯಿಕ ಧೋರಣೆ, ಜೀವನ ದೃಷ್ಟಿ, ವೈಯಕ್ತಿಕ ನಿಲುವುಗಳ ಬಗ್ಗೆ ಭಿನ್ನಾಭಿಪ್ರಾಯ ತಳೆಯಬಹುದು. ಆದರೆ ಅವರ ವಿಷಯ, ಮುಗ್ಧತೆ, ಅಂತಃಕರಣ, ಪ್ರಾಮಾಣಿಕತೆಯನ್ನು ಕುರಿತು ಯಾವುದೇ ಕಾರಣಕ್ಕೂ ಪ್ರಶ್ನಿಸುವ ಹಾಗಿಲ್ಲ. ಅವರು ಕನ್ನಡಕ್ಕೆ ನೀಡಿದ ಕೊಡುಗೆ ಅವರ ಎಲ್ಲ ಸಾಹಿತ್ಯಿಕ ದೋಷಗಳನ್ನು ಮರೆಸಿದೆ.

ಶ್ರೀಯವರು ಸಮಕಾಲೀನ ಮತ್ತು ಆಮೇಲಿನ ಲೇಖಕರ ಮೇಲೆ ಬೀರಿದ ಪ್ರಭಾವ ಅಸದೃಶವಾದುದು. ಆಡಿ, ಮಾಡಿ, ನಡೆದು ತೋರಿಸುವುದರ ಮೂಲಕ ಬಿ.ಎಂ.ಶ್ರೀ. ಬರೆದದ್ದು ಸ್ವಲ್ಪ; ಆದರೆ ಮಾಡಿ ತೋರಿದ್ದೆ ಬಹಳ. ಈ ಸಂದರ್ಭದಲ್ಲಿ ಇಬ್ಬರು ಹಿರಿಯ ಲೇಖಕರ ಮಾತನ್ನು ಉಲ್ಲೇಖಿಸಬಹುದು:

೧. ಮಾಸ್ತಿಯವರ ಮಾತು– 'ಮಲಾರ' ಸಂಕಲನದ ಪದ್ಯವೊಂದರಿಂದ:

**ಕನ್ನಡದೊಳಿಂದಾವ**
**ಕಲಕಂಠ ಕೇಳುತಿದೆ ಅದರ ಗಾನದೊಳೆಲ್ಲ**
**ತೋರುತಿದೆ ನೀವು ತೆರೆದಾ ನವ್ಯ ಅಕ್ಷುಲ್ಲ**
**ಧೀರಗತಿ, ಸುವಿಶಾಲ ವಿಸ್ತರ ಭಾವ.**

೨. ಕುವೆಂಪು ಹೇಳಿದ್ದು : 'ವಿಶ್ವಕರ್ಣಾಟಕ ಯುಗಾದಿ ಸಂಚಿಕೆ'ಯಿಂದ ಶ್ರೀಯವರನ್ನು ನವಯುಗದ ಪ್ರವರ್ತಕರೆಂದರೆ ತಪ್ಪಾಗದು, ಅವರು ಬಯಲಿಗೆ ಬಂದುದೇನೋ 'ಇಂಗ್ಲಿಷ್ ಗೀತಗಳು' ಗ್ರಂಥರೂಪದಲ್ಲಿ ಹೊರಬಿದ್ದ ಮೇಲೆ. ಆದರು ಅವರ ಪ್ರಭಾವವು ಗುಪ್ತಗಾಮಿನಿಯಾದ ವಾಹಿನಿಯಂತೆ ಅನೇಕ ವೃಕ್ಷಗಳಿಗೆ ನೀರೆರೆದಿದೆ.

ಹೀಗೆ ಶ್ರೀಯವರು ನವೋದಯ ಲೇಖಕರ ಮೇಲೆ ಪ್ರಭಾವ ಬೀರಿದ್ದು ನಿಜ. ಹೊಸಗನ್ನಡ ಕಾವ್ಯಮಾರ್ಗ ಮತ್ತು ಬಿ.ಎಂ.ಶ್ರೀ. ಜೊತೆಯಲ್ಲಿ ಹೆಜ್ಜೆ ಹಾಕಿದಂತೆ ತೋರುವುದು. ಅವರ 'ಇಂಗ್ಲಿಷ್ ಗೀತಗಳು' ಇಂತಹ ನವೋದಯ ದಾರಿಗೆ ಕಾರಣವಾಯಿತು. ಅದೊಂದು ಐತಿಹಾಸಿಕ ಘಟನೆ ಎಂದೇ ಬಿಂಬಿತವಾಗಿದೆ. ಸುಪ್ರಸಿದ್ಧ ನವೋದಯ ಕವಿಗಳಾದ ಕುವೆಂಪು, ಬೇಂದ್ರೆ, ಗೋವಿಂದ ಪೈ ಅವರ ಮೇಲೆ ಬೀರಿದ ಪ್ರಭಾವ ಎಷ್ಟು? ಹೇಗೆ? ಈ ಮೂವರು ಕವಿಗಳೂ ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ವಿಧಾನಗಳಲ್ಲಿ ಕೆಲಸ ಮಾಡುತ್ತಿದ್ದವರು. ಅವರ ಮೇಲೆ ಬಿ.ಎಂ.ಶ್ರೀ.ಯವರ ಪ್ರಭಾವವನ್ನು ಖಚಿತವಾಗಿ ಹೇಳಲು ಬರುವುದಿಲ್ಲ. ಸರಳ ರಗಳೆಯನ್ನು ಕುವೆಂಪು ಬಳಸಿದ ಮೇಲೆ ಬಿ.ಎಂ.ಶ್ರೀ.ಯವರು ಬಳಸಿದಂತೆ ತೋರುವುದು. ಸರಳ ರಗಳೆಯಲ್ಲಿ ರಚಿತವಾದ ಬಿ.ಎಂ.ಶ್ರೀ.ಯವರ 'ಅಶ್ವತ್ಥಾಮನ್' ನಾಟಕಕ್ಕೆ ಕುವೆಂಪು ಅವರ 'ಜಲಗಾರ', 'ಯಮನ ಸೋಲು', 'ಮಹಾರಾತ್ರಿ', 'ಬಿರುಗಾಳಿ' ನಾಟಕಗಳ ಪ್ರೇರಣೆ ಕಾರಣವೆಂದು ಕುವೆಂಪು ಅವರೇ ಹೇಳಿದ್ದಾರೆ.

ಹಾಗೆಯೇ 'ಅಶ್ವತ್ಥಾಮನ್' ನಾಟಕದ ಪ್ರಭಾವ ಆಮೇಲೆ ರಚಿತವಾದ ಕುವೆಂಪು ಅವರ 'ಬೆರಳ್‌ಗೆ ಕೊರಳ್', 'ಶ್ಮಶಾನ ಕುರುಕ್ಷೇತ್ರ' ನಾಟಕಗಳ ಮೇಲೆ ಆಗಿರಬೇಕು.

**ಲೇಖಕರಿಗೆ ಕೃತಜ್ಞತೆಗಳು**

ಬಿ.ಎಂ.ಶ್ರೀ.ಯವರ ಬಗೆಗಿನ ಈ ಲೇಖನವನ್ನು ಪ್ರಕಟಿಸಲು ಸಹಕರಿಸಿದ ಲೇಖಕ ಶ್ರೀಯುತ ರಾಮೇಗೌಡರಿಗೆ ಬಿ.ಎಂ.ಶ್ರೀ. ಪ್ರತಿಷ್ಠಾನವು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

## ಹಸ್ತಪ್ರತಿ ವಿಭಾಗ

ದಿನಾಂಕ ೨೦.೦೨.೨೦೨೬ ಶುಕ್ರವಾರದಂದು ಬೆಂಗಳೂರಿನ ಆವಲಹಳ್ಳಿ ಬಡಾವಣೆಯ ರಂಗಮಂದಿರದಲ್ಲಿ ಸೇಂಟ್ ಲಾರೆನ್ಸ್ ಶಾಲೆಯು ಏರ್ಪಡಿಸಿದ್ದ **ಪಾರಂಪರಿಕ ಪ್ರದರ್ಶನದಲ್ಲಿ** ಬಿ.ಎಂ.ಶ್ರೀ. ಪ್ರತಿಷ್ಠಾನದ ಲಿಪಿಪಟಗಳನ್ನು ಮತ್ತು ತಾಳೆಗರಿಗಳ ಹಸ್ತಪ್ರತಿಗಳನ್ನು ಪ್ರದರ್ಶಿಸಲಾಯಿತು. ಇದು ಆಸಕ್ತರ ಗಮನ ಸೆಳೆಯಿತು.

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 28-02-2026

# ಪ್ರಸ್ತುತ ತಿಂಗಳ ಅಂಗಳ

ಮಾರ್ಚ್ ತಿಂಗಳ ಕಾರ್ಯಕ್ರಮಗಳ ತಾತ್ಪೂರ್ತಿಕ ಮಾಹಿತಿ

**೦೭.೦೩.೨೦೨೬ ಶನಿವಾರ ಸಂಜೆ ೫.೦೦ ಗಂಟೆಗೆ**
ಡಾ. ಉಪ್ಪಂಗಳ ರಾಮಭಟ್ಟ ದತ್ತಿ
ವಿಷಯ: ಗಂಗಾಧರಂ ಶಾಸನ
ವಿಚಾರ ಮಂಡನೆ: ಡಾ. ಸಿ.ಕೆ. ಜಗದೀಶ್

**೨೬.೦೩.೨೦೨೬ ಗುರುವಾರ ಸಂಜೆ ೫.೦೦ ಗಂಟೆಗೆ**
ಕಣಕಟ್ಟೆ ಕೃಷ್ಣಮೂರ್ತಿರಾವ್ ದತ್ತಿ ಸಂಗೀತ ಕಾರ್ಯಕ್ರಮ
ನಡೆಸಿಕೊಡುವವರು –
ವಿದುಷಿ ಶ್ರೀಮತಿ ಸುಧಾ ನಟರಾಜ್ ಮತ್ತು ತಂಡ

**೨೯.೦೩.೨೦೨೬ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ**
ಶ್ರೀ ಕೆ. ಮೋಹನ್ ದೇವ್ ಆಳ್ವ ಮತ್ತು ಡಾ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ ಡಾ. ನಾಗಪ್ಪ ಆಳ್ವ ಮತ್ತು ಶ್ರೀಮತಿ ಕಲ್ಯಾಣಿ ಆಳ್ವ ದತ್ತಿ, ಸಾ.ಪ. ಗಾಂವಕರ್ ದತ್ತಿ, ಡಾ. ದಿನಕರ ದೇಸಾಯಿ ದತ್ತಿ, ಡಾ. ತೋನ್ಸೆ ಮಾಧವ ಅನಂತ ಪೈ ದತ್ತಿ, ಡಾ. ಡಿ.ಎಸ್. ಕರ್ಕಿ ದತ್ತಿ, ಡಾ. ವಿಷ್ಣುನಾಯ್ಕ ದತ್ತಿ, ಶ್ರೀ ಕೋಟ ರಾಮಕೃಷ್ಣ ಕಾರಂತ ದತ್ತಿ, ಶ್ರೀ ಕಾಂತಾವರ ಬೀಡು ಜಿನರಾಜ ಹೆಗ್ಗಡೆ ದತ್ತಿ




ಕೋಚೆ ನೆನಪಿನ ದತ್ತಿ ಆಶ್ರಯದಲ್ಲಿ ಟಿ.ಎಸ್. ದಕ್ಷಿಣಾಮೂರ್ತಿ ಅವರು 'ಕೋಚೆ ಅವರ ಅನುವಾದಗಳು' ಕುರಿತು ಉಪನ್ಯಾಸ ನೀಡಿದರು. ಡಾ. ಆರ್. ಲಕ್ಷ್ಮೀನಾರಾಯಣ ಅಧ್ಯಕ್ಷತೆ ವಹಿಸಿದ್ದರು.



ಪ್ರೊ. ಎಲ್.ಎಸ್. ಶೇಷಗಿರಿರಾವ್ ಹೆಸರಿನ ವಿಮರ್ಶಾ ಪ್ರಶಸ್ತಿಯನ್ನು ಟಿ.ಪಿ.ಅಶೋಕ ಅವರಿಗೂ, ವಿ. ನಾಗರಾಜರಾವ್ ಹೆಸರಿನ ಸಮೂಹ ಮಾಧ್ಯಮ ಪ್ರಶಸ್ತಿಯನ್ನು ನಾಗಮಣಿ ಎಸ್. ರಾವ್ ಅವರಿಗೂ ಹಿರಿಯ ಸಾಹಿತಿ ಡಾ. ಕೆ.ಆರ್. ಸಂಧ್ಯಾರೆಡ್ಡಿ ಪ್ರದಾನ ಮಾಡಿದರು. ಚಿತ್ರದಲ್ಲಿ ಚಂದ್ರಶೇಖರ್ ನಾದೂರು, ರಾಜೇಶ್ವರಿ ಕೃಷ್ಣ, ಶಾಂತರಾಜು, ಆರ್. ಲಕ್ಷ್ಮೀನಾರಾಯಣ, ಭಾರತಿ ಶೇಷಗಿರಿರಾವ್, ಬೈರಮಂಗಲ ರಾಮೇಗೌಡ ಇದ್ದಾರೆ.

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭